# ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ, ರಾ.ಹೆ. –೪, ಶಿಗ್ಗಾವಿ ತಾ. ಹಾವೇರಿ ಜಿಲ್ಲೆ – ೫೮೧ ೧೯೭

## ಪ್ರವೇಶಾತಿ ಪ್ರಕಟಣೆ

ಕ.ಜಾ.ವಿ.ವಿ./ ಪ್ರ.ಅ/೨೦೧೬–೧೭/೨೪೮ ದಿನಾಂಕ:೧೪.೦೬.೨೦೧೬

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು **೨೦೧೬–೧೭** ನೇ ಶೈಕ್ಷಣಿಕ ಸಾಲಿನಲ್ಲಿ ಕೇಂದ್ರಸ್ಥಾನದಲ್ಲಿ ಹಾಗೂ ಪ್ರಾದೇಶಿಕ ಜಾನಪದ ಅಧ್ಯಯನ ಕೇಂದ್ರಗಳಲ್ಲಿ ನಡೆಯುವ ಈ ಕೆಳಕಂಡ ಸ್ನಾತಕೋತ್ತರ ಪದವಿ /ಸರ್ಟಿಫಿಕೇಟ್/ ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

**ಅ) ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕೇಂದ್ರಸ್ಥಾನ, ಗೊಟಗೋಡಿ**

| | **ಕೋರ್ಸ್‌ಗಳು** | **ವಿಷಯ** |
|---|---|---|
| ೧ | ಎಂ.ಎ. | ಗ್ರಾಮೀಣ ಹಾಗೂ ಬುಡಕಟ್ಟು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಜಾನಪದ ವಿಜ್ಞಾನ, ಜನಪದ ಸಾಹಿತ್ಯ, ಜನಪದ ಕಲೆ, ಜನಪದ ಸಂವಹನ; ಮತ್ತು ಜನಪದ ಪ್ರವಾಸೋದ್ಯಮ |
| ೨ | ಎಂ.ಎಸ್ಸಿ | ಪಾರಂಪರಿಕ ವಿಜ್ಞಾನ ಮತ್ತು ತಂತ್ರಜ್ಞಾನ |
| ೩ | ಎಂ.ಬಿ.ಎ. | ಗ್ರಾಮೀಣ ಮತ್ತು ಬುಡಕಟ್ಟು ವ್ಯವಹಾರ ನಿರ್ವಹಣೆ |
| ೪ | ಸ್ನಾತಕೋತ್ತರ ಡಿಪ್ಲೊಮಾ ಕೋರ್ಸ್ | ಜನಪದ ಮಹಾಕಾವ್ಯ, ಪಾರಂಪರಿಕ ಹೈನುಗಾರಿಕೆ, ಜನಪದ ಸಂಗೀತ ಉಪಕರಣಗಳು: ನಿರ್ಮಾಣ ಮತ್ತು ಮಾರಾಟ ಮತ್ತು ಬಯಲಾಟ ಡಿಪ್ಲೊಮಾ ಶಿಕ್ಷಣ |
| ೫ | ಸರ್ಟಿಫಿಕೇಟ್ ಕೋರ್ಸ್‌ಗಳು | ಜನಪದ ಗೀತ ಸಂಪ್ರದಾಯ, ಕಸೂತಿ ಕಲೆ, ಜನಪದ ವೈದ್ಯ, ದೊಡ್ಡಾಟ |

**ಆ) ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರಗಳಲ್ಲಿ ನಡೆಯುವ ಸ್ನಾತಕೋತ್ತರ ಡಿಪ್ಲೊಮಾ ಮತ್ತು ಸರ್ಟಿಫಿಕೇಟ್ ಶಿಕ್ಷಣಗಳ ವಿವರ**

| **ಮಲೆಮಹದೇಶ್ವರ ಬೆಟ್ಟ** | **ಬೀದರ್** |
|---|---|
| ೧) ಬೀಸು ಕಂಸಾಳೆ ಸರ್ಟಿಫಿಕೇಟ್ ಕೋರ್ಸ್<br>೨) ಜನಪದ ಗೀತ ಸಂಪ್ರದಾಯ ಸರ್ಟಿಫಿಕೇಟ್ ಕೋರ್ಸ್<br>೩) ಕಸೂತಿ ಕಲೆ ಸರ್ಟಿಫಿಕೇಟ್ ಕೋರ್ಸ್<br>೪) ಡೊಳ್ಳು ಕುಣಿತ ಸರ್ಟಿಫಿಕೇಟ್ ಕೋರ್ಸ್ | ೧) ಜನಪದ ವೈದ್ಯ ಸರ್ಟಿಫಿಕೇಟ್ ಕೋರ್ಸ್<br>೨) ಜನಪದ ಗೀತ ಸಂಪ್ರದಾಯ ಸರ್ಟಿಫಿಕೇಟ್ ಕೋರ್ಸ್<br>೩) ಕಸೂತಿ ಕಲೆ ಸರ್ಟಿಫಿಕೇಟ್ ಕೋರ್ಸ್<br>೪) ಸಮರ ಕಲೆ ಸರ್ಟಿಫಿಕೇಟ್ ಕೋರ್ಸ್<br>೫) ಜನಪದ ನೃತ್ಯ ಸರ್ಟಿಫಿಕೇಟ್ ಕೋರ್ಸ್<br>೬) ಬಿದರಿ ಕಲೆ ಸರ್ಟಿಫಿಕೇಟ್ ಕೋರ್ಸ್<br>೭) ಪಾರಂಪರಿಕ ಹೈನುಗಾರಿಕೆ ಸ್ನಾತಕೋತ್ತರ ಡಿಪ್ಲೊಮಾ |
| **ಮಂಡ್ಯ** | **ಜೊಯಿಡಾ (ಉತ್ತರ ಕನ್ನಡ ಜಿಲ್ಲೆ)** |
| ೧) ಬೀಸು ಕಂಸಾಳೆ ಸರ್ಟಿಫಿಕೇಟ್ ಕೋರ್ಸ್<br>೨) ಜನಪದ ಗೀತ ಸಂಪ್ರದಾಯ ಸರ್ಟಿಫಿಕೇಟ್ ಕೋರ್ಸ್<br>೩) ಜನಪದ ನೃತ್ಯ ಸರ್ಟಿಫಿಕೇಟ್ ಕೋರ್ಸ್<br>೪) ಡೊಳ್ಳು ಕುಣಿತ ಸರ್ಟಿಫಿಕೇಟ್ ಕೋರ್ಸ್ | ೧) ಜನಪದ ಗೀತ ಸಂಪ್ರದಾಯ ಸರ್ಟಿಫಿಕೇಟ್ ಕೋರ್ಸ್<br>೨) ಜನಪದ ನೃತ್ಯ ಸರ್ಟಿಫಿಕೇಟ್ ಕೋರ್ಸ್ |

**ಸೂಚನೆಗಳು:**

೧. ವಿದ್ಯಾರ್ಹತೆ, ಅರ್ಜಿ ನಮೂನೆ, ಪ್ರವೇಶ ಶುಲ್ಕ ಹಾಗೂ ಇತರ ಮಾಹಿತಿಗಳನ್ನು ವಿವರಣಾ ಪುಸ್ತಕದಿಂದ ಪಡೆಯಬಹುದು ಅಥವಾ ವಿಶ್ವವಿದ್ಯಾಲಯದ ವೆಬ್‌ಸೈಟ್ **www.janapadauni.in** ನ್ನು ಸಂಪರ್ಕಿಸಬಹುದು.

೨. ಅಂತಿಮ ವರ್ಷದ ಪದವಿ ಪರೀಕ್ಷೆಗೆ ಹಾಜರಾಗಿ ಫಲಿತಾಂಶ ನಿರೀಕ್ಷಿಸುತ್ತಿರುವ ವಿದ್ಯಾರ್ಥಿಗಳು ಸಹ ಅರ್ಜಿಗಳನ್ನು ಸಲ್ಲಿಸಬಹುದು. ಆದರೆ, ಫಲಿತಾಂಶ ಪ್ರಕಟಣೆಯ ಅನಂತರ ಅಂಕಪಟ್ಟಿಗಳನ್ನು ಕೂಡಲೇ ಇಂಟರ್‌ನೆಟ್ ಮೂಲಕ ಪಡೆದು ಸಂಬಂಧಿಸಿದ ವಿಭಾಗಕ್ಕೆ ಸಲ್ಲಿಸುವುದು.

೩. ಅನಿವಾಸಿ ಭಾರತೀಯ ಮತ್ತು ವಿದೇಶಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ನಿಯಮಗಳನುಸಾರ ಮುಕ್ತ ಪ್ರವೇಶವನ್ನು ಕಲ್ಪಿಸಲಾಗುವುದು.

೪. ವಿವರಣಾ ಪುಸ್ತಕದ ಶುಲ್ಕ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ರೂ. ೨೦೦/–( ರೂ. ಎರಡು ನೂರು ಮಾತ್ರ) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ – ೧ ರ ವಿದ್ಯಾರ್ಥಿಗಳಿಗೆ ರೂ. ೧೦೦/–(ರೂ. ಒಂದು ನೂರು ಮಾತ್ರ) ಗಳಾಗಿರುತ್ತವೆ. ಅಂತಹ ವಿದ್ಯಾರ್ಥಿಗಳು ಜಾತಿ ದೃಢೀಕರಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು.

೫. ಅರ್ಜಿ ಹಾಗೂ ವಿವರಣಾ ಪುಸ್ತಕಗಳನ್ನು ದಿನಾಂಕ: **೧೫.೦೬.೨೦೧೬** ರಿಂದ **೩೧.೦೭.೨೦೧೬** ರವರೆಗೆ ಪಡೆಯಬಹುದು.

೬. ಅಂಚೆ ಮೂಲಕ ಅರ್ಜಿ ಹಾಗೂ ವಿವರಣಾ ಪುಸ್ತಕಗಳನ್ನು ಪಡೆಯಲು ಇಚ್ಛಿಸುವವರು, ನಿಗದಿಪಡಿಸಿದ ಶುಲ್ಕದ ಡಿ.ಡಿ.ಯನ್ನು **ಹಣಕಾಸು ಅಧಿಕಾರಿಗಳು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ** – ಇವರ ಹೆಸರಿಗೆ ಪಡೆದು ರೂ. ೬೦/- ಅಂಚೆ ಚೀಟಿವುಳ್ಳ ಸ್ವಯಂ ವಿಳಾಸ ಹೊಂದಿದ ಲಕೋಟೆಯನ್ನು **ಕುಲಸಚಿವರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ – ೫೮೧ ೧೯೭** ಇವರಿಗೆ ಸಲ್ಲಿಸಿ ಪಡೆಯಬಹುದು.

೭. ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡ ಅರ್ಜಿಗಳಿಗೆ ರೂ. ೨೫೦/- (ರೂ. ಎರಡು ನೂರಾ ಐವತ್ತು ಮಾತ್ರ) (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ – ೧ ರ ವಿದ್ಯಾರ್ಥಿಗಳಿಗೆ ರೂ. ೧೨೫/- ( ರೂ. ಒಂದು ನೂರಾ ಇಪ್ಪತ್ತೈದು ಮಾತ್ರ) ಮೊತ್ತದ ಡಿ.ಡಿ. ಯನ್ನು ಲಗತ್ತಿಸಿ ಸಲ್ಲಿಸತಕ್ಕದ್ದು.

೮. ಪ್ರತಿ ಕೋರ್ಸಿಗೆ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಸಲ್ಲಿಸಿದ ಅರ್ಜಿಯನ್ನು ಬೇರೆ ಕೋರ್ಸಿಗೆ ವರ್ಗಾವಣೆ ಮಾಡಲಾಗುವುದಿಲ್ಲ.

೯. ಭರ್ತಿ ಮಾಡಿದ ಅರ್ಜಿಗಳನ್ನು **ಕುಲಸಚಿವರು(ಮೌಲ್ಯಮಾಪನ)** ಇವರಿಗೆ **ದಿನಾಂಕ: ೩೧.೦೭.೨೦೧೬** ರೊಳಗಾಗಿ ಸಲ್ಲಿಸಬೇಕು.

೧೦. ಅಭ್ಯರ್ಥಿಗಳು **ದಿನಾಂಕ: ೧೮.೦೮.೨೦೧೬** ರೊಳಗಾಗಿ ಪ್ರವೇಶಾತಿಯನ್ನು ಪಡೆಯತಕ್ಕದ್ದು.

೧೧. ಯಾವುದೇ ಕೋರ್ಸ್‌ಗಳಿಗೆ ಅಗತ್ಯ ಸಂಖ್ಯೆಯ ಅರ್ಜಿಗಳು ಸ್ವೀಕೃತವಾಗದಿದ್ದಲ್ಲಿ ಅಂತಹ ಕೋರ್ಸ್‌ಗಳನ್ನು ನಡೆಸುವುದರ ಬಗ್ಗೆ ವಿಶ್ವವಿದ್ಯಾಲಯದ ನಿರ್ಣಯವೇ ಅಂತಿಮ.

೧೨. ವಿವಿಧ ಕೋರ್ಸ್‌ಗಳ ಪ್ರವೇಶ ಶುಲ್ಕದ ವಿವರ ಹಾಗೂ ಪ್ರವೇಶ ಕೌನ್ಸಿಲಿಂಗ್ ದಿನಾಂಕಗಳ ಮಾಹಿತಿಯನ್ನು ಅರ್ಜಿಯೊಂದಿಗೆ ನೀಡಲಾಗುವುದು.

೧೩. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮಲೆಮಹದೇಶ್ವರ ಬೆಟ್ಟ, ಜೊಯಿಡಾ, ಮಂಡ್ಯ ಹಾಗೂ ಬೀದರ್‌ನ ಪ್ರಾದೇಶಿಕ ಜಾನಪದ ಅಧ್ಯಯನ ಕೇಂದ್ರಗಳಲ್ಲಿ ಸ್ನಾತಕೋತ್ತರ ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರವೇಶ ಬಯಸುವವರು ಸಂಬಂಧಿಸಿದ ಅಧ್ಯಯನ ಕೇಂದ್ರಗಳಿಂದಲೂ ನಿಗದಿತ ಶುಲ್ಕವನ್ನು **ಹಣಕಾಸು ಅಧಿಕಾರಿಗಳು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ** ಹೆಸರಿನಲ್ಲಿ ಪಾವತಿಸಿ ಅರ್ಜಿ ಪಡೆಯಬಹುದು.

೧೪. ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾಲಯದ ಕಛೇರಿಗೆ ಭೇಟಿ ನೀಡಿ ವಿಚಾರಿಸಬಹುದು ಅಥವಾ ಕಛೇರಿ **ದೂರವಾಣಿ ಸಂಖ್ಯೆ: ೦೮೩೬-೨೨೫೫೧೮೦,** ಮಲೆಮಹದೇಶ್ವರ ಬೆಟ್ಟ ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರದ ದೂರವಾಣಿ ಸಂಖ್ಯೆ: **೦೮೨೨೫-೨೭೨೬೭,** ಬೀದರ್ ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರದ ದೂರವಾಣಿ ಸಂಖ್ಯೆ: **೯೪೪೮೫೮೫೩೪೪** ಹಾಗೂ ಜೊಯಿಡಾ ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರದ ದೂರವಾಣಿ ಸಂಖ್ಯೆ: **೮೦೫೦೪೪೯೮೪೧ ಹಾಗೂ** ಮಂಡ್ಯ ಪ್ರಾದೇಶಿಕ ಜಾನಪದ ಅಧ್ಯಯನ ಹಾಗೂ ಜನಪದ ಕಲೆಗಳ ಕಲಿಕಾ ಕೇಂದ್ರದ ದೂರವಾಣಿ ಸಂಖ್ಯೆ: **೯೪೪೯೬೯೬೧೬** ರ ಮೂಲಕ ಸಂಪರ್ಕಿಸಬಹುದು.

**ಆದೇಶದ ಮೇರೆಗೆ,**

ಕುಲಸಚಿವರು (ಮೌಲ್ಯಮಾಪನ)